# ಅಪರಾಧಿಗಳನ್ನು ಪತ್ತೆ ಹಚ್ಚಿದವರನ್ನೇ ದೋಷಿಗಳೆಂದ ಎಎಪಿ

**ಅರುಣ್ ಜೇಟ್ಲಿ**
**ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)**

ಜುಲೈ ೨೭, ೨೦೦೮ರಂದು ಮೂರು ಭಾಜಪ ಸಂಸದರಾದ ಫಗನ್ ಸಿಂಗ್ ಖುಲಸ್ತೆ, ಮಹಾಬೀರ್ ಸಿಂಗ್ ಭಗೋರಾ ಮತ್ತು ಅಶೋಕ್ ಅರ್ಗಲ್ ಅವರುಗಳಿಗೆ ಲಂಚ ನೀಡುವ ಪ್ರಯತ್ನ ಮಾಡಲಾಯಿತು. ಲಂಚ ನೀಡುವ ಕ್ರಿಯೆಯನ್ನು ಅವರು ದಾಖಲಿಸಿದರು. ಅಮೇರಿಕದೊಂದಿಗೆ ನಾಗರಿಕ ಪರಮಾಣು ಒಪ್ಪಂದ ಮಾಡಿಕೊಳ್ಳುವ ವಿಚಾರದಲ್ಲಿ ಸಂಸತ್‌ನಲ್ಲಿ ಮಂಡಿಸಲಾದ ವಿಶ್ವಾಸ ನಿರ್ಣಯಕ್ಕೆ ಪರವಾಗಿ ಮತ ಚಲಾಯಿಸಲು ಈ ಲಂಚ ನೀಡಲಾಗಿತ್ತು. ಲಂಚ ನೀಡಿಕೆ ಪ್ರಕರಣದ ದಾಖಲೆ ಮಾಡಿದ ನಂತರ ನೇರವಾಗಿ ಸಂಸತ್‌ಗೆ ನಡೆದರು. ಸಂಸತ್ ಸದನದಲ್ಲಿ ಲಂಚದ ಹಣವನ್ನು ಬಹಿರಂಗ ಪಡಿಸಿದರು; ಸರ್ಕಾರದ ಪರವಾಗಿ ಅಡ್ಡ ಮತ ಚಲಾಯಿಸುವಂತೆ ಸಂಸದರಿಗೆ ಲಂಚ ನೀಡಿದ ವಿಚಾರವನ್ನು ಅವರು ಬಹಿರಂಗ ಪಡಿಸಿದರು. ಈ ಪ್ರಕರಣದ ತನಿಖೆ ನಡೆಸಿದ ದೆಹಲಿ ಪೋಲಿಸರು ಅಪರಾಧವನ್ನು ಬಹಿರಂಗ ಪಡಿಸಿದ ಮುರೂ ಸಂಸದರ ಮೇಲೆ ಲಂಚ ನೀಡುವ ಮತ್ತು ಸ್ವೀಕರಿಸುವ ಸಂಚು ರೂಪಿಸಿದ ಆರೋಪ ಹೇರಿದರು. ಲಂಚ ನೀಡಿದವರೊಂದಿಗೆ ಅಪರಾಧ ಬಹಿರಂಗ ಪಡಿಸಿದವರನ್ನು ಸೆರೆಹಿಡಿಯಲಾಯಿತು. ನಂತರ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ದೆಹಲಿಯ ಸಿಬಿಐ ವಿಶೇಷ ನ್ಯಾಯಾಧೀಶರ ಮುಂದೆ ಆರೋಪ ಪಟ್ಟಿ ಸಲ್ಲಿಸಲಾಯಿತು. ನವೆಂಬರ್ ೨೨, ೨೦೧೩ರಂದು ದೆಹಲಿಯ ಸಿಬಿಐ ವಿಶೇಷ ನ್ಯಾಯಾಧೀಶರಾದ ಶ್ರೀ ನರೋತ್ತಮ್ ಕೌಶಲ್ ಅವರು ಆರೋಪ ಬಹಿರಂಗ ಪಡಿಸಿದವರನ್ನು ಮತ್ತು ಕೆಲವು ಅನ್ಯರನ್ನು ಬಿಡುಗಡೆ ಮಾಡಿದರು. ನ್ಯಾಯಮೂರ್ತಿಗಳು ತಮ್ಮ ತೀರ್ಪಿನಲ್ಲಿ ಕೆಳಕಂಡಂತೆ ತಿಳಿಸಿದ್ದರು:

"ಆರೋಪಿಗಳು, ಸಿಎನ್‌ಎನ್–ಐಬಿಎನ್ ತಂಡ ಮತ್ತು ಮೂರು ಭಾಜಪ ಸಂಸದರ ನಡುವೆ ಒಪ್ಪಂದ ಅಥವಾ ಮನಸ್ಸುಗಳ ಸಮಾಗಮ ಏರ್ಪಟ್ಟಿತ್ತು ಎಂಬುದಕ್ಕೆ ಲಭ್ಯವಾದ ಏಕೈಕ ಸಾಕ್ಷಿ ಎಂದರೆ ಕಾಂಗ್ರೆಸ್ ಪಕ್ಷ ಹಾಗೂ ಸಮಾಜವಾದಿ ಪಕ್ಷಗಳ ನಾಯಕರು ಅನ್ಯ ಪಕ್ಷಗಳ ಸಂಸದರನ್ನು ಅಕ್ರಮವಾಗಿ ಆಮಿಷ ಒಡ್ಡಿ ಖರೀದಿಸುವ ಪ್ರಯತ್ನ ನಡೆಸಿದ್ದರು. ಸಂಸದರ ಕ್ರಮ ಅಕ್ರಮವಾಗಿತ್ತು ಅಥವಾ ಅಕ್ರಮ ಉದ್ದೇಶದೊಂದಿಗೆ ಮಾಡಲಾದ ಸಕ್ರಮ ಕ್ರಮವಾಗಿತ್ತು ಎಂದು ಹೇಳಲಾಗದು; ಅದ್ದರಿಂದ ಐಪಿಸಿ ೧೨೦ಬಿ ಅಡಿ ಆರೋಪ ಹೊರೆಸಲು ಸಾಧ್ಯವಿಲ್ಲ".

ಅಕ್ರಮ ನಡೆದ ಮಾಹಿತಿ ನೀಡಿದ್ದ ಮತ್ತಿಬ್ಬರಾದ ಸುಧೀಂದ್ರ ಕುಲಕರ್ಣಿ ಮತ್ತು ಸುಹೇಲ್ ಹಿಂದುಸ್ತಾನಿ ಅವರ ವಿಚಾರದಲ್ಲೂ ಇದೇ ಆದೇಶವನ್ನು ನ್ಯಾಯಾಲಯ ನೀಡಿತ್ತು. ಇವರಿಬ್ಬರ ವಿಚಾರದಲ್ಲಿ ನ್ಯಾಯಾಧೀಶರ ಅನಿಸಿಕೆ ಹೀಗಿತ್ತು: "ಲಂಚ ಕೊಟ್ಟವರನ್ನು ಹಿಡಿಯಲು ನಡೆಸಿದ ನಾಟಕದಲ್ಲಿ ಇವರಿಬ್ಬರು ಸಕ್ರಿಯ ಪಾತ್ರಧಾರಿಗಳಾಗಿದ್ದರು, ಸಿಎನ್‌ಎನ್–ಐಬಿಎನ್ ತಂಡ ಈ ನಾಟಕದ ದೃಶ್ಯಾವಳಿಗಳನ್ನು ಸೆರೆಹಿಡಿಯುತ್ತಿದೆ ಎಂಬ ಮಾಹಿತಿ ಇದ್ದರೂ, ನಂತರದ ಘಟನಾವಳಿಗಳು ನಡೆದಾಗ ಆರೋಪಿಗಳಾದ ಭಾಜಪ ಸಂಸದರೊಂದಿಗೆ ಇವರೂ ಇದ್ದರು".

ಅಕ್ರಮ ನಡೆದ ಮಾಹಿತಿ ನೀಡುವವರ ಹಕ್ಕುಗಳಿಗೆ ಮತ್ತು ಅವರ ರಕ್ಷಣೆಗೆ ಹೋರಾಟ ನಡೆಸಿದ ಇವರಿಗೆ ನ್ಯಾಯಾಲಯದ ತೀರ್ಪಿನಿಂದ ಭಾರಿ ಜಯ ಸಂದಿದೆ. ಭ್ರಷ್ಟಾಚಾರದ ಪ್ರಕರಣಗಳು ಬೆಳಕಿಗೆ ಬರಲು, ಅಕ್ರಮಗಳನ್ನು ಬಹಿರಂಗಕ್ಕೆ ತರುವವರ ಸಂಖ್ಯೆ ಭಾರತದಲ್ಲಿ ಹೆಚ್ಚಬೇಕಿದೆ. ಅಕ್ರಮಗಳನ್ನು ಬಹಿರಂಗಕ್ಕೆ ತರುವವರ ರಕ್ಷಣೆ ಮಸೂದೆ ಅಥವಾ ವಿಜ಼ಲ್‌ಬ್ಲೋವರ್ಸ್ ಬಿಲ್

ಲೋಕಸಭೆಯಲ್ಲಿ ಅಂಗೀಕರಿಸ್ಪಟ್ಟಿದೆ. ರಾಜ್ಯಸಭೆಯಲ್ಲಿ ಈಗಲೂ ಮಸೂದೆ ಪಾಸಾಗಿಲ್ಲ. ಪ್ರಸ್ತುತ ಅಧಿವೇಶನದಲ್ಲಿ ಶಾಸನ ಮಾಡುವ ಅವಕಾಶವೇನಾದರು ಇದ್ದರೆ ಅದು ಈ ಮಸೂದೆಗೆ ಅಂಕಿತ ಹಾಕುವುದರಲ್ಲಿದೆ. ಇಷ್ಟರಲ್ಲೇ ಇದಕ್ಕೆ ಶಾಸನಾತ್ಮಕ ಅನುಮೋದನೆ ಸಿಗಬಹುದೆಂಬ ಆಶಯ ನನ್ನದು.

ಈ ಪ್ರಕರಣದಲ್ಲಿ ದೊರೆತ ನ್ಯಾಯಿಕ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಎಎಪಿ ನಿರ್ಧರಿಸಿದೆ ಎಂಬ ವಿಸ್ತೃತ ವರದಿ ಇಂದಿನ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಲೋಕಪಾಲ್ ಹಾಗೂ ಅಕ್ರಮ ಬಹಿರಂಗ ಪಡಿಸುವವರ ಪರ ಹೋರಾಟ ನಡೆಸಿ ಉದ್ಭವಿಸಿದ ಪಕ್ಷವೆಂದು ಎಎಪಿ ಪ್ರಚಾರ ಮಾಡುತ್ತದೆ. ಈ ಹಿನ್ನಲೆಯಲ್ಲಿ, ಲಂಚಕೋರರನ್ನು ಹಿಡಿದುಕೊಟ್ಟವರನ್ನು ಬೆಂಬಲಿಸಿ ದೇಶದ ಘನತವೆತ್ತ ನ್ಯಾಯಾಲಯ ನೀಡಿದ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವ ಎಎಪಿ ನಿರ್ಧಾರ ನನಗೆ ಆಶ್ಚರ್ಯ ತರಿಸಿದೆ. ಸತ್ಯಸಂಗತಿಯೆಂದರೆ, ೨೦೦೮ರ ಜುಲೈನಲ್ಲಿ ನಡೆದ ವಿಶ್ವಾಸ ಮತದಲ್ಲಿ ಕೆಲವಾರು ಸದಸ್ಯರು ಅಡ್ಡ ಮತ ಚಲಾಯಿಸಿದ್ದರು. ಕೆಲವರು ಒಪ್ಪಿಕೊಂಡಿರುವಂತೆ ಸಂಸದರಿಗೆ ಲಂಚದ ಆಮಿಷ ನೀಡಲಾಗಿತ್ತು. ವಾಸ್ತವವಾಗಿ, ಲಂಚ ಪ್ರಕರಣವನ್ನು ಬಹಿರಂಗ ಪಡಿಸುವ ಉದ್ದೇಶದಿಂದಲೇ ಮೂರೂ ಸಂಸದರು ಮತ್ತು ಅವರ ಇಬ್ಬರು ಸಹುದ್ಯೋಗಿಗಳು ಖಾಸಗಿ ದೃಷ್ಯ ಮಾಧ್ಯಮ ತಂಡವನ್ನು ಕರೆಸಿ ಲಂಚ ನೀಡುವ ಮತ್ತು ಪಡೆಯುವ ಕ್ರಿಯೆಯನ್ನು ದಾಖಲಿಸಲು ನಡೆಸಿದ ನಾಟಕದ ಸೂತ್ರಧಾರಿಗಳಾಗಿದ್ದರು. ಸ್ವತಂತ್ರ ಭಾರತದ ಇತಿಹಾಸದಲ್ಲೇ ಕಾಣದ ಅತಿ ದೊಡ್ಡ ಹಗರಣವನ್ನು ಅವರು ಬಹಿರಂಗ ಪಡಿಸಿದ್ದಾರೆ. ಆದರೆ ಅವರ ವಿರುದ್ಧವೇ ಆರೋಪ ಸಲ್ಲಿಸಿದಾಗ ನ್ಯಾಯಾಲಯ ಅವರನ್ನು ಆರೋಪ ಮುಕ್ತಗೊಳಿಸಿದೆ.

ಆದರೆ ಈಗ ಶ್ರೀ ಅರವಿಂದ್ ಕೇಜ್ರಿವಾಲ್ ಅವರ ಸರ್ಕಾರ ಅಕ್ರಮ ಬಹಿರಂಗ ಪಡಿಸಿದವರ ವಿರುದ್ಧವೇ ಮೊಕದ್ದಮೆ ಹೂಡಲಿದೆ ಎಂಬ ವರದಿ ನಮ್ಮೆಲ್ಲರನ್ನು ಚಕಿತಗೊಳಿಸಿದೆ. ರಾಜಕೀಯ ಆಲೋಚನೆಗಳ ಸ್ಥಿರತೆ ಮರೆಯಾಗುತ್ತಿದೆ. ಸ್ವಾರಸ್ಯಕರ ಸಂಗತಿ ಎಂದರೆ, ಭ್ರಷ್ಟರ ಕೃತ್ಯವನ್ನು ವೀಡಿಯೋ ಮೂಲಕ ಸೆರೆಹಿಡಿಯುವ ಸಲಹೆಯನ್ನು ಸ್ವತಃ ಕೇಜ್ರಿವಾಲ್ ನೀಡುತ್ತಾರೆ. ಆದರೆ ಈ ಪ್ರಕರಣದಲ್ಲಿ ಆಮ್ ಆದ್ಮಿ ಪಕ್ಷದ ಮಾನದಂಡ ಅನುಸರಿಸಿದರೆ, ಎಲ್ಲರೂ ಐಪಿಸಿ ೧೨೦–ಬಿ ಅಡಿ ತಪ್ಪಿತಸ್ಥರಾಗುತ್ತಾರೆ.

***************